ಹೊಳೆಯುತ್ತದೆ, ಯಾವಾಗ ಹೊಳೆಯುತ್ತದೆ ಗೊತ್ತಿಲ್ಲ. ದೊಡ್ಡ ಬಯಲಲ್ಲಿ ಮಳೆಗೆ ಕಾದ ಹಾಗೆ ಬೊಗಸೆ ಚಾಚಿ ಹಿಡಿದು ನಿಂತಿರಬೇಕು. ಮಳೆ ಬಂದಾಗ ಬೊಗಸೆಯಲ್ಲಿ ತುಂಬಿಕೊಳ್ಳಬೇಕು. ಯೋಚನೆ ಮಾಡಿದರೆ 'ನಿಜವಾಗಲೂ ನಾನು ಹೀಗೆಲ್ಲ ಸಂಗೀತ ಸಂಯೋಜನೆ ಮಾಡ್ತೀನಾ?' ಅಂತ ಆಶ್ಚರ್ಯವಾಗುತ್ತದೆ.

ನನಗಂತೂ ಎಕ್ಸೈಟ್‌ಮೆಂಟ್‌ನಲ್ಲಿ ಟ್ಯೂನ್‌ಗಳು ಹುಟ್ಟುವುದು ಜಾಸ್ತಿ. ಯಾರೋ ನಿರ್ದೇಶಕರೋ ಸ್ನೇಹಿತರೋ ಯಾವುದೋ ಅದ್ಭುತ ಕಥೆ ಹೇಳಿದಾಗ ಆ ಸ್ಫೂರ್ತಿಯಲ್ಲಿ, ಆ ಚೈತನ್ಯಕ್ಕೆ, ಆ ಸನ್ನಿವೇಶಕ್ಕೆ ಟ್ಯೂನ್‌ಗಳು ಹೊಳೆದುಬಿಡುತ್ತವೆ.

ಒಂದು ಹಾಡು ಬೇರೆ ಬೇರೆ ಹಂತಗಳಲ್ಲಿ ರೂಪುಗೊಳ್ಳುತ್ತದೆ. ಕೆಲವೊಂದು ಸಲ ಹಾಡಿನ ಪಲ್ಲವಿ ಮತ್ತು ಚರಣ ಒಂದೇ ಹಂತದಲ್ಲಿ ಹೊಳೆದುಬಿಡುತ್ತದೆ. ಇನ್ನು ಕೆಲವು ಸಲ ಮೊದಲರ್ಧ ಹೊಳೆದಿರುತ್ತದೆ, ಕೊನೆಯೂ ಹೊಳೆದಿರುತ್ತದೆ. ಮಧ್ಯ ಹೇಗೆ ತುಂಬಿಸುವುದು ಗೊತ್ತಾಗುತ್ತಿರುವುದಿಲ್ಲ. ಆ ಹೊಳೆಯದ ಸಾಲು ಕೊಟ್ಟಷ್ಟು ಕಾಟ ಇನ್ಯಾವುದೂ ಕೊಡಲಾರದು. ಮೊದಲು–ಕೊನೆ ಎರಡೂ ಗೊತ್ತಿರುತ್ತದೆ; ನಡುವೆ ಏನು ಕಂಪೋಸ್ ಮಾಡಿದರೂ ಹೊಂದಿಕೆ ಆಗುತ್ತಿರುವುದಿಲ್ಲ. ಆ ಸಾಲನ್ನು ಕಂಪೋಸ್ ಮಾಡುವುದು ದೊಡ್ಡ ತಲೆಬಿಸಿಯಾಗಿಬಿಡುತ್ತದೆ.

> ಆ ಹೊಳೆಯದ ಸಾಲು ಕೊಟ್ಟಷ್ಟು ಕಾಟ ಇನ್ಯಾವುದೂ ಕೊಡಲಾರದು. ಮೊದಲು–ಕೊನೆ ಎರಡೂ ಗೊತ್ತಿರತ್ತೆ; ನಡುವೆ ಏನು ಕಂಪೋಸ್ ಮಾಡಿದರೂ ಹೊಂದಿಕೆ ಆಗುತ್ತಿರುವುದಿಲ್ಲ.

ಕೆಲವೊಮ್ಮೆ ಹಾಡು ಕಂಪೋಸ್ ಮಾಡುವಾಗ ಹಿಂದೆಲ್ಲೋ ಕೇಳಿದ, ನಮಗೆ ತುಂಬ ಇಷ್ಟವಾದ ಹಾಡಿನ, ಟ್ಯೂನಿನ ಛಾಯೆ ಬಂದುಬಿಡುವುದೂ ಇದೆ. ಅಂಥ ಸಂದರ್ಭದಲ್ಲಿ ನಾನು ಆ ರಾಗವನ್ನೇ ಮುಟ್ಟಲಿಕ್ಕೆ ಹೋಗುವುದಿಲ್ಲ. ಸ್ವಲ್ಪ ವಿರಾಮ ಕೊಟ್ಟು, ಅದಕ್ಕೆ ಪೂರ್ತಿ ವಿರುದ್ಧವಾದ ಟ್ಯೂನ್ ನುಡಿಸಿ, ಬೇರೆ ಏನಾದ್ರೂ ಹಾಡಿ ಆ ಗುಂಗಿನಿಂದ ಪೂರ್ತಿ ಹೊರಗೆ ಬರುತ್ತೇನೆ. ಸ್ವಲ್ಪ ಗ್ಯಾಪ್ ಕೊಟ್ಟು ಮತ್ತೆ ಸಂಯೋಜನೆಗೆ ಕೂತುಕೊಳ್ಳುತ್ತೇನೆ.

ಕೆಲವೊಮ್ಮೆ ಟ್ಯೂನ್ ಹೊಳೆಯದೇ ಇದ್ದಾಗ, ತುಂಬ ಸತಾಯಿಸಿದಾಗ 'ಏನಪ್ಪಾ ಇಷ್ಟು ಬೇಗ ನಾನು ಖಾಲಿಯಾಗಿ ಹೋದೆನಾ? ಟ್ಯೂನ್‌ಗಳೇ ಹೊಳೆಯುತ್ತಿಲ್ಲವಲ್ಲ' ಅನಿಸುತ್ತದೆ. ಏನೇನೋ ಕೆಟ್ಟ ಕೆಟ್ಟ ಟ್ಯೂನ್‌ಗಳೆಲ್ಲ ಬರುತ್ತವೆ; ನನಗೇ ಇಷ್ಟ ಆಗುವುದಿಲ್ಲ. ಆಗೆಲ್ಲ ಆತ್ಮವಿಶ್ವಾಸ ಕುಗ್ಗಿಹೋಗುತ್ತದೆ. ಮತ್ತೆ ಹೊಸ ಟ್ಯೂನ್ ಸಿಕ್ಕಾಗ ಆ ಖುಷಿಯಲ್ಲಿ ಆತ್ಮವಿಶ್ವಾಸ ಮತ್ತೆ ತುಂಬಿಕೊಳ್ಳುತ್ತದೆ. ಕಸವೆಲ್ಲ ಹೊರಬಂದು ಖಾಲಿಯಾದ ಮೇಲೆಯೇ ಒಳ್ಳೆಯದು ಬರುತ್ತದೆಯಲ್ಲವೇ?

ಸಿನಿಮಾ ಸಂಗೀತ ಸಂಯೋಜನೆಯಲ್ಲಿ ನಾವು ನಾವಾಗಿ ಯೋಚಿಸುತ್ತಿರುವುದಿಲ್ಲ. ನಿರ್ದೇಶಕನ ದೃಷ್ಟಿಯಿಂದ, ಪ್ರೇಕ್ಷಕನ ದೃಷ್ಟಿಯಿಂದ ಇನ್ಯಾರೋ ಆಗಿ ಯೋಚಿಸುತ್ತಿರುತ್ತೇವೆ. ಅದರಲ್ಲಿಯೂ ಒಂದು ಹಾಡು ಹಿಟ್ ಆಗಿಬಿಡ್ತು ಅಂದರೆ ನಮಗೆ ನಾವೇ ಇನ್ನಷ್ಟು ಗೋಡೆಗಳನ್ನು ಹಾಕಿಕೊಳ್ಳುತ್ತೇವೆ. ಜನರು ಮೆಚ್ಚಿಕೊಳ್ಳುತ್ತಾರೋ ಇಲ್ಲವೋ ಎಂಬ ಒತ್ತಡ ಕೆಲಸ ಮಾಡುತ್ತಲೇ ಇರುತ್ತದೆ. ಪ್ರತಿಸಲವೂ ಈ ಒತ್ತಡ ಉಂಟಾಗುತ್ತದೆ ಮತ್ತು ಅದನ್ನು ಮೀರಲೇಬೇಕಾಗುತ್ತದೆ. ಹೀಗೆ ಪ್ರತಿಯೊಂದು ಹಾಡು ಕಟ್ಟುವಾಗಲೂ ನನ್ನೊಳಗಿನ ಆತ್ಮವಿಶ್ವಾಸವನ್ನು ಪೂರ್ತಿಯಾಗಿ ಖಾಲಿ ಮಾಡಿಕೊಂಡು ಹೊಸತಾಗಿ ಗಳಿಸಿಕೊಳ್ಳುತ್ತಿರುತ್ತೇನೆ. ಅದು ಎಂದೆಂದಿಗೂ ಮುಗಿಯದ ಪ್ರಕ್ರಿಯೆ...